# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **11(14)** |
| **ಸದಸ್ಯರ ಹೆಸರು** | **ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ)** |
| **ಉತ್ತರಿಸಬೇಕಾದ ದಿನಾಂಕ** | **27.01.2026** |
| **ಉತ್ತರಿಸಬೇಕಾದ ಸಚಿವರು** | **ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.** |
| **ಪ್ರಶ್ನೆ** | **ಉತ್ತರ** |
| (ಅ) ರಾಜ್ಯದಲ್ಲಿ ಒಟ್ಟು ಎಷ್ಟು ಸ್ಟಾರ್ಟಪ್‌ಗಳು ಆರಂಭಗೊಂಡಿವೆ; ಈ ಸ್ಟಾರ್ಟಪ್‌ಗಳಿಂದ ಎಷ್ಟು ನಿರುದ್ಯೋಗಿಗಳಿಗೆ ಉದ್ಯೋಗ ದೊರಕಿದೆ; (ಜಿಲ್ಲಾವಾರು ವಿವರ ನೀಡುವುದು); | ಕರ್ನಾಟಕ ಸ್ಟಾರ್ಟ್‌ಅಪ್ ನೀತಿಯಡಿಯಲ್ಲಿ ಪ್ರೋತ್ಸಾಹಕಗಳನ್ನು ಪಡೆಯುವ ಸಲುವಾಗಿ ಮಾತ್ರ ಸ್ಟಾರ್ಟ್‌ಅಪ್‌ಗಳು ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿ (ಕಿಟ್ಸ್)ಯಲ್ಲಿ ನೋಂದಾಯಿಸಲು ಅರ್ಜಿ ಸಲ್ಲಿಸುತ್ತಾರೆ.<br>ಕಿಟ್ಸ್ ಸಂಸ್ಥೆಯ ಸ್ಟಾರ್ಟ್‌ಅಪ್‌ನಲ್ಲಿ ಸುಮಾರು 4,000ಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳು ನೋಂದಣಿಯಾಗಿರುತ್ತವೆ ಹಾಗೂ ಈ ಸ್ಟಾರ್ಟ್‌ಅಪ್‌ಗಳಿಂದ ಉದ್ಯೋಗ ದೊರಕಿದ ಜಿಲ್ಲಾವಾರು ವಿವರಗಳನ್ನು **ಅನುಬಂಧ** ದಲ್ಲಿರಿಸಿದೆ. |
| (ಆ) ಕಳೆದ 3 ವರ್ಷಗಳಿಂದ ರಾಜ್ಯದಲ್ಲಿ ಸ್ಟಾರ್ಟಪ್‌ಗಳ ಆರಂಭಕ್ಕೆ ಅನುಮತಿ ಕೋರಿ ಎಷ್ಟು ಪ್ರಸ್ತಾವನೆಗಳು ಸಲ್ಲಿಕೆಯಾಗಿವೆ; ಡಿಸೆಂಬರ್ 2025ರ ಅಂತ್ಯದವರೆಗೆ ಎಷ್ಟು ಪ್ರಸ್ತಾವನೆಗಳಿಗೆ ಸರ್ಕಾರ ಅನುಮತಿ ನೀಡಿದೆ; | ಕರ್ನಾಟಕ ನವೋದ್ಯಮ ನೀತಿ ಅಡಿಯಲ್ಲಿ ಕಳೆದ 3 ವರ್ಷಗಳಿಂದ ಸುಮಾರು 3,000ಕ್ಕೂ ಹೆಚ್ಚು ನವೋದ್ಯಮ (ಸ್ಟಾರ್ಟ್‌ಅಪ್) ಗಳು ಅರ್ಜಿಗಳನ್ನು ಸಲ್ಲಿಸಿರುತ್ತಾರೆ.<br>ರಾಜ್ಯದಾದ್ಯಂತ ಡಿಸೆಂಬರ್, 2025ರ ಅಂತ್ಯದವರೆಗೆ ಸುಮಾರು 2,500ಕ್ಕೂ ಹೆಚ್ಚು ನವೋದ್ಯಮಗಳು ನೋಂದಾಯಿತಗೊಂಡಿವೆ. |

| | |
|---|---|
| (ಇ) ಸ್ಟಾರ್ಟಪ್‌ಗಳಿಗೆ ಅನುಮತಿ ನೀಡಲು ಸರ್ಕಾರ ನಿಗದಿಪಡಿಸಿರುವ ಮಾನದಂಡಗಳೇನು; (ವಿವರ ನೀಡುವುದು); | ಕರ್ನಾಟಕ ನವೋದ್ಯಮ ನೀತಿ 2025-30 ರಡಿಯಲ್ಲಿ ಸ್ಟಾರ್ಟ್‌ಅಪ್‌ಗಳು ನೋಂದಣಿಗೊಳ್ಳಲು ನಿಗದಿಪಡಿಸಿರುವ ಮಾನದಂಡಗಳು ಈ ಕೆಳಕಂಡಂತಿವೆ:-<br><br>1. ಸ್ಟಾರ್ಟ್‌ಅಪ್ ಖಾಸಗಿ ಲಿಮಿಟೆಡ್ ಕಂಪನಿಯಾಗಿ (ಕಂಪನಿ ಕಾಯ್ದೆ, 2013ರಲ್ಲಿ ಸೂಚಿಸಿರುವಂತೆ) ಅಥವಾ ಪಾಲುದಾರ ಸಂಸ್ಥೆಯಾಗಿ (ಪಾಲುದಾರಿಕೆ ಕಾಯ್ದೆ 1932ರ ಸೆಕ್ಷನ್ 59ರಡಿಯಲ್ಲಿ) ಅಥವಾ ಸೀಮಿತ ಹೊಣೆಗಾರಿಕೆ ಪಾಲುದಾರಿಕೆ ಸಂಸ್ಥೆಯಾಗಿ (ಸೀಮಿತ ಹೊಣೆಗಾರಿಕೆ ಪಾಲುದಾರಿಕೆ ಕಾಯ್ದೆ, 2008) ಕರ್ನಾಟಕದಲ್ಲಿ ನೋಂದಣಿ ಆಗಿರಬೇಕು.<br>2. ಸಂಯೋಜನೆ/ಸ್ಥಾಪನೆ ಆದ ಬಳಿಕ/ನೋಂದಣಿ ಆದಂದಿನಿಂದ ಸಂಸ್ಥೆಯ ವಹಿವಾಟು ಯಾವುದೇ ಹಣಕಾಸು ವರ್ಷದಲ್ಲಿ ರೂ.100 ಕೋಟಿ ಮೀರಿರಬಾರದು.<br>3. ಸಂಯೋಜನೆಗೊಂಡ ದಿನಾಂಕದಿಂದ 10 ವರ್ಷಗಳವರೆಗೆ ಸಂಸ್ಥೆಯು ಸ್ಟಾರ್ಟ್‌ಅಪ್ ಎಂದು ಪರಿಗಣಿಸಬೇಕು.<br>4. ಸ್ಟಾರ್ಟ್‌ಅಪ್ ನವೋನ್ವೇಷಣೆ/ಪ್ರಸ್ತುತ ಇರುವ ಉತ್ಪನ್ನಗಳು/ಸೇವೆಗಳು ಮತ್ತು ಪ್ರಕ್ರಿಯೆಗಳ ಸುಧಾರಣೆಗಳ ಕಡೆಗೆ ಕೆಲಸ ಮಾಡಬೇಕು ಮತ್ತು ಉದ್ಯೋಗ/ಸಂಪತ್ತಿನ ಸೃಜನೆಯ ಸಾಮರ್ಥ್ಯ ಹೊಂದಿರಬೇಕು. |
| (ಈ) ಅನುಮತಿ ಕೋರಿ ಬಾಕಿ ಇರುವ ಪ್ರಸ್ತಾವನೆಗಳಿಗೆ ಸರ್ಕಾರ ಯಾವ ಕಾಲಮಿತಿಯೊಳಗೆ ಅನುಮತಿ ನೀಡಲಿದೆ? | ಕರ್ನಾಟಕ ನವೋದ್ಯಮ ನೀತಿಯಡಿಯಲ್ಲಿ ಸ್ಟಾರ್ಟ್‌ಅಪ್‌ಗಳ ನೋಂದಣಿಗೆ ಸ್ವೀಕೃತವಾದ ಅರ್ಜಿಗಳಿಗೆ ರಾಜ್ಯ ಸರ್ಕಾರವು ಸಕಾಲ ಸೇವೆಗಳ ಅಧಿನಿಯಮ, 2011 ಹಾಗೂ (ತಿದ್ದುಪಡಿ) ಅಧಿನಿಯಮ, 2014ರ ಅನುಸೂಚಿಯಂತೆ 20 ಕೆಲಸದ ದಿನಗಳನ್ನು ನಿಗದಿಪಡಿಸಿದೆ. |

**(ಐಟಿಬಿಟಿ 13 ಎಲ್‌ಸಿಎಂ 2026)**

**(ಪ್ರಿಯಾಂಕ್ ಖರ್ಗೆ)**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್,
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು

# ಅನುಬಂಧ

## ಸ್ಟಾರ್ಟ್‌ಅಪ್‌ಗಳಿಂದ ನಿರುದ್ಯೋಗಿಗಳಿಗೆ ಉದ್ಯೋಗ ದೊರಕಿದ ಜಿಲ್ಲಾವಾರು ವಿವರಗಳು

| ಕ್ರ.ಸಂ. | ಜಿಲ್ಲೆ | ಒಟ್ಟು ಉದ್ಯೋಗಿಗಳ ಸಂಖ್ಯೆ |
|---|---|---|
| 1 | ಬಾಗಲಕೋಟೆ | 39 |
| 2 | ಬಳ್ಳಾರಿ | 36 |
| 3 | ಬೆಳಗಾವಿ | 244 |
| 4 | ಬೆಂಗಳೂರು ಗ್ರಾಮೀಣ | 309 |
| 5 | ಬೆಂಗಳೂರು ನಗರ | 5650 |
| 6 | ಬೀದರ್ | 64 |
| 7 | ಚಾಮರಾಜನಗರ | 18 |
| 8 | ಚಿಕ್ಕಬಳ್ಳಾಪುರ | 12 |
| 9 | ಚಿಕ್ಕಮಗಳೂರು | 24 |
| 10 | ಚಿತ್ರದುರ್ಗ | 22 |
| 11 | ದಕ್ಷಿಣ ಕನ್ನಡ | 368 |
| 12 | ದಾವಣಗೆರೆ | 33 |
| 13 | ಧಾರವಾಡ | 216 |
| 14 | ಗದಗ | 20 |
| 15 | ಹಾಸನ | 42 |
| 16 | ಹಾವೇರಿ | 10 |
| 17 | ಕಲಬುರಗಿ | 156 |
| 18 | ಕೊಡಗು | 14 |
| 19 | ಕೋಲಾರ | 20 |
| 20 | ಕೊಪ್ಪಳ | 24 |
| 21 | ಮಂಡ್ಯ | 22 |
| 22 | ಮೈಸೂರು | 452 |
| 23 | ರಾಯಚೂರು | 21 |
| 24 | ರಾಮನಗರ | 10 |
| 25 | ಶಿವಮೊಗ್ಗ | 72 |
| 26 | ತುಮಕೂರು | 57 |
| 27 | ಉಡುಪಿ | 132 |
| 28 | ಉತ್ತರ ಕನ್ನಡ | 48 |
| 29 | ವಿಜಯಪುರ | 45 |
| 30 | ಯಾದಗಿರಿ | 2 |
| 31 | ವಿಜಯನಗರ | 8 |